# ಭಕ್ತನ ಭಾವನೆ



* ಕೆಲವು ವೇಳೆ ನಾನು ಕಾಳೀದೇವಾಲಯದಲ್ಲಿ ಕುಳಿತು ಭಾವಿಸಿಕೊಳ್ಳುತ್ತೇನೆ, 'ತಾಯೆ , ಮನಸ್ಸು ಎಂಬುದು ನೀನೇ ಅಲ್ಲದೆ ಮತ್ತೆ ಬೇರೆ ಏನೂ ಅಲ್ಲ' ಅಂತ. ನನ್ನ ದೃಷ್ಟಿಯಿಂದ ಶುದ್ಧ ಮನಸ್ಸು ಎಂದರೂ ಒಂದೆ, ಶುದ್ಧ ಬುದ್ಧಿ ಎಂದರೂ ಒಂದೆ, ಶುದ್ಧ ಆತ್ಮ ಎಂದರೂ ಒಂದೇ. *(ಶ್ರೀರಾಮಕೃಷ್ಣ ವಚನವೇದ, ಸಂಪುಟ ೨, ಪು.೨೦೯)*

* ಭಕ್ತಿಯೇ ಸಾರ. ಸಕಾಮ ಭಕ್ತಿ ಎಂಬುದು ಒಂದು ಇದೆ. ಮತ್ತೆ ನಿಷ್ಕಾಮ ಭಕ್ತಿ, ಶುದ್ಧ ಭಕ್ತಿ, ಅಹೇತುಕ ಭಕ್ತಿ ಇವೂ ಇವೆ. ಕೇಶವಸೇನನಿಗೆ ಮತ್ತು ಬ್ರಾಹ್ಮಸಮಾಜದವರಿಗೆ ಅಹೇತುಕ ಭಕ್ತಿ ಎಂಬುದು ಒಂದು ಇದೆ ಎಂಬುದು ಗೊತ್ತಿರಲಿಲ್ಲ. ಈ ಭಕ್ತಿಯಲ್ಲಿ ಯಾವ ಕಾಮನೆಯೂ ಇಲ್ಲ; ಇದು ಕೇವಲ ಭಗವಂತನ ಪಾದಪದ್ಮಗಳಲ್ಲಿ ಇಟ್ಟಿರುವ ಶುದ್ಧಭಕ್ತಿಯೇ ಅಲ್ಲದೆ ಬೇರೆ ಏನೂ ಅಲ್ಲ. *(ಅಲ್ಲೇ, ಪು.೨೧೧)*

* ಮತ್ತೆ ಬೇರೆ ಇದೆ ಊರ್ಜಿತ ಭಕ್ತಿ ಎಂಬುದು. ಇದರಲ್ಲಿ ಭಕ್ತಿ ಉಕ್ಕಿ ಹರಿಯುತ್ತಿರುವುದೋ ಏನೊ ಎಂಬಂತೆ ತೋರುತ್ತದೆ. ಇದು ಉಂಟಾದಾಗ ಭಕ್ತ 'ನಗುತ್ತಾನೆ, ಅಳುತ್ತಾನೆ, ನರ್ತಿಸುತ್ತಾನೆ, ಹಾಡುತ್ತಾನೆ.' ಇದಕ್ಕೆ ಉದಾಹರಣೆ ಶ್ರೀಚೈತನ್ಯದೇವ. ರಾಮ ಲಕ್ಷ್ಮಣನಿಗೆ ಹೇಳಿದ, 'ತಮ್ಮ, ಯಾರಲ್ಲಿ ನೀನು ಊರ್ಜಿತ ಭಕ್ತಿಯನ್ನು ನೋಡುವೆಯೊ, ಆತನಲ್ಲಿ ನಾನು ಸ್ವಯಂ ಇದ್ದೇನೆ ಎಂಬುದನ್ನು ತಿಳಿದುಕೊ' ಅಂತ. *(ಅಲ್ಲೇ, ಪು.೨೧೧)*

* ನಿಮಗೆಲ್ಲ ನಾನು ಹೇಳಬೇಕೆಂದಿರುವುದು ಇಷ್ಟೆ. ನೀವು ಎರಡು ಕಡೆಗೂ ಮನಸ್ಸನ್ನಿಡಬೇಕು; ಸಂಸಾರದ ಕಡೆಗೂ ಮನಸ್ಸನ್ನಿಡಬೇಕು; ಯಾವುದರಿಂದ ಭಕ್ತಿ ದೊರಕುವುದೊ ಅದರ ಕಡೆಗೂ ಮನಸ್ಸನ್ನಿಡಬೇಕು. *(ಅಲ್ಲೇ, ಪು.೨೧೮)*

* 'ಭಕ್ತಿಯ ಅಹಂ', 'ವಿದ್ಯೆಯ ಅಹಂ', 'ಬಾಲಕನ ಅಹಂ'— ಇವುಗಳಲ್ಲಿ ಯಾವ ದೋಷವೂ ಇಲ್ಲ. ಶಂಕರಾಚಾರ್ಯರು ಲೋಕ ಶಿಕ್ಷಣಾರ್ಥವಾಗಿ 'ವಿದ್ಯೆಯ ಅಹಂ' ಅನ್ನು ಇಟ್ಟುಕೊಂಡಿದ್ದರು. 'ಬಾಲಕನ ಅಹಂ'ನಲ್ಲಿ ಯಾವ ಆಸಕ್ತಿಯೂ ಇಲ್ಲ. ಬಾಲಕ ತ್ರಿಗುಣಾತೀತ, — ಯಾವ ಗುಣಕ್ಕೂ ವಶನಾಗಿಲ್ಲ. ಈ ನಿಮಿಷ ಕೋಪಿಸಿಕೊಳ್ಳುತ್ತಾನೆ; ಮರುನಿಮಿಷ ನೋಡಿದರೆ ಕೋಪ ಏನೂ ಇಲ್ಲ. ಈ ನಿಮಿಷ ಆಟದ ಮನೆ ಕಟ್ಟುತ್ತಾನೆ; ಮರುನಿಮಿಷ ಅದನ್ನು ಮರೆತೇ ಬಿಡುತ್ತಾನೆ. ಈಗ ಕಾಣುತ್ತಾನೆ, ತನ್ನ ಗೆಳೆಯರನ್ನು ಬಹಳವಾಗಿ ಪ್ರೀತಿಸುತ್ತಿರುವಂತೆ; ಕೆಲವು ದಿನ ಅವರು ಕಣ್ಣಿಗೆ ಬೀಳದೆ ಇದ್ದರು ಅಂದರೆ, ಅವರನ್ನು ಸಂಪೂರ್ಣವಾಗಿ ಮರೆತೇಬಿಡುತ್ತಾನೆ. ಬಾಲಕ ಸತ್ತ್ವ, ರಜಸ್ಸು, ತಮಸ್ಸು ಇವುಗಳಾವುದಕ್ಕೂ ವಶನಾಗಿಲ್ಲ. *(ಅಲ್ಲೇ, ಪು.೨೨೪)*

* 'ನೀನು ಭಗವಂತ, ನಾನು ಭಕ್ತ' ಇದು ಭಕ್ತನ ಭಾವ — 'ಭಕ್ತಿಯ ಅಹಂ' ಎಂಬುದು ಇದೇನೇ. ಏಕೆ, ಭಕ್ತ 'ಭಕ್ತಿಯ ಅಹಂ' ಇಟ್ಟುಕೊಳ್ಳುತ್ತಾನೆ? ಆತನ ಭಾವನೆ, ಈ 'ಅಹಂ' ಎಂಬುದು ಹೋಗತಕ್ಕದ್ದಲ್ಲ ; ಆದ್ದರಿಂದ ಈ ನೀಚ 'ಅಹಂ' 'ದಾಸ ಅಹಂ' ಆಗಿ, 'ಭಕ್ತನ ಅಹಂ' ಆಗಿ ಇರಲಿ ಅಂತ. *(ಅಲ್ಲೇ, ಪು.೨೨೪)*

* ಬೇಕಾದಷ್ಟು ವಿಚಾರದಲ್ಲಿ ತೊಡಗು, 'ಅಹಂ' ಎಂಬುದು ಹೋಗುವುದಿಲ್ಲ. 'ಅಹಂ' ಎಂಬುದೇ ಕುಂಭ, ಬ್ರಹ್ಮನೇ ಎಲ್ಲೆಲ್ಲೂ ನೀರೇನೀರಾಗಿರುವ ಸಮುದ್ರ ಅಂತ ಇಟ್ಟುಕೊಳ್ಳಿ. ಕುಂಭದ ಒಳಗೂ ಹೊರಗೂ ನೀರು ತುಂಬಿದೆ; ಎಲ್ಲೆಲ್ಲೂ ಬರೀ ನೀರೇ ನೀರು; ಆದರೂ ಕುಂಭ ಎಂಬುದು ಮಾತ್ರ ಇದ್ದೇ ಇರುತ್ತದೆ. ಈ ಕುಂಭವೇ ಭಕ್ತನ 'ಅಹಂ' ಎಂಬುದರ ಸ್ವರೂಪ. ಎಲ್ಲಿಯವರೆಗೆ ಕುಂಭ ಎಂಬುದು ಇರುವುದೊ, ಅಲ್ಲಿಯವರೆಗೆ 'ನಾನು', 'ನೀನು', ಎಂಬುದು ಇದ್ದೇ ಇರುತ್ತದೆ; 'ನೀನು ಪ್ರಭು, ನಾನು ದಾಸ; ನೀನು ಭಗವಂತ, ನಾನು ಭಕ್ತ' ಎಂಬುವೂ ಇದ್ದೇ ಇರುತ್ತವೆ. ಬೇಕಾದಷ್ಟು ವಿಚಾರದಲ್ಲಿ ತೊಡಗು, ಇದು ಹೋಗತಕ್ಕದಲ್ಲ. ಕುಂಭವೇ ಹೋಗಿ ಬಿಟ್ಟಿತು ಅಂದರೆ ಆಗ ಅದು ಬೇರೆ ಸಮಾಚಾರ. *(ಅಲ್ಲೇ, ಪು. ೨೨೫)*

* 'ಧ್ಯಾನದ ಸಮಯದಲ್ಲಿ ಮನಸ್ಸು ಅಂಥ ಏಕಾಗ್ರತೆಯನ್ನು ಹೊಂದಿರುತ್ತದೆ. ಆಗ ಏನನ್ನು ನೋಡುವುದಕ್ಕೂ ಆಗುವುದಿಲ್ಲ. ಕೇಳುವುದಕ್ಕೂ ಆಗುವುದಿಲ್ಲ. ಸ್ಪರ್ಶದ ಬೋಧೆ ಕೂಡ ಆಗುವುದಿಲ್ಲ. ಹಾವು ಮೈಮೇಲೆ ಹರಿದುಹೋದರೂ ಅದು ಗೊತ್ತಾಗುವುದೇ ಇಲ್ಲ. ಧ್ಯಾನಸ್ಥನಿಗೆ ಹಾವು ತನ್ನ ಮೈಮೇಲೆ ಹರಿದುಹೋದುದು ಗೊತ್ತಾಗದು. ಅದೇ ರೀತಿಯಾಗಿ ಹಾವಿಗೂ ತಾನು ಮನುಷ್ಯನ ದೇಹದ ಮೇಲೆ ಹರಿದುಹೋಗುತ್ತಿದ್ದೇನೆ ಎಂಬ ಭಾವನೆಯೇ ಉಂಟಾಗದು. *(ಅಲ್ಲೇ, ಪು. ೨೮೦-೮೧)*

''ಗಾಢ ಧ್ಯಾನದಲ್ಲಿ ಇಂದ್ರಿಯವ್ಯಾಪಾರ ಸಂಪೂರ್ಣವಾಗಿ ನಿಂತುಹೋಗಿಬಿಡುತ್ತದೆ. ಆಗ ಮನಸ್ಸು ಬಹಿರ್ಮುಖವಾಗಿರದು. ಇದು ಬೀದಿ ಬಾಗಿಲನ್ನು ಹಾಕಿ ಒಳಗೆ ಕುಳಿತಂತೆ. ಇಂದ್ರಿಯಗಳ ಐದೂ ವಸ್ತುಗಳೂ ರೂಪ, ರಸ, ಗಂಧ, ಸ್ಪರ್ಶ, ಶಬ್ದ — ಜಗಲಿ ಮೇಲೆ ಬಿದ್ದಿರಬೇಕಾಗುತ್ತದೆ. *(ಅಲ್ಲೇ, ಪು. ೨೮೧)*

ಶ್ರೀರಾಮಕೃಷ್ಣ ವಚನವೇದದಿಂದ